ಕಿ.ರಂ. ನಾಗರಾಜ

# ಎಂ. ವ್ಯಾಸ ರುದ್ರಕಾಲದ ಲಯಗಳನ್ನು ಹಿಡಿದ ಪ್ರತಿಭೆ

ಕನ್ನಡದ ಅಪೂರ್ವ ಕತೆಗಾರ ಕಾಸರಗೋಡಿನ ಎಂ. ವ್ಯಾಸ ಅವರು ಕಣ್ಮರೆಯಾಗಿ ಇಂದಿಗೆ ಎಂಟು ವರ್ಷಗಳಾದುವು. ತನ್ನ ಕತೆಗಳ ಮೂಲಕ, ಆತ್ಮೀಯ ಸಂಬಂಧಗಳ ಮೂಲಕ ಅನೇಕ ಓದುಗರಿಗೆ ಹತ್ತಿರವಾಗಿದ್ದ ವ್ಯಾಸರ ಸ್ಮರಣೆ ಆಗೊಮ್ಮೆ ಈಗೊಮ್ಮೆ ಅಲ್ಲಲ್ಲಿ ಈಗಲೂ ನಡೆಯುವುದಿದೆ. ಅಂಥದ್ದೊಂದು ಕಾರ್ಯಕ್ರಮ 24.07. 2010ರಂದು ಮಂಗಳೂರಿನ ದಾಸಜನ ಗೆಳೆಯರ ನೇತೃತ್ವದಲ್ಲಿ ನಡೆದಾಗ ಖ್ಯಾತ ವಿಮರ್ಶಕರಾದ ಕಿ.ರಂ. ನಾಗರಾಜ ಅವರು ಭಾಗವಹಿಸಿ ವ್ಯಾಸರ ಕುರಿತು ಮಾತನಾಡಿದ್ದರು. ಅದಾದ ಕೆಲವೇ ದಿನಗಳಲ್ಲಿ ಕಿ.ರಂ. ಕೂಡಾ ನಿಧನರಾದರು. ಕಿ.ರಂ. ಅವರು ಮಂಗಳೂರಿನಲ್ಲಿ ಮಾಡಿದ ಕೊನೆಯ ಉಪನ್ಯಾಸವಾಗಿ ಅದು ದಾಖಲಾಯಿತು. ಆ ಉಪನ್ಯಾಸವನ್ನು ಸಂಗ್ರಹಿಸಿ, ಅದಕ್ಕೆ ಬರಹರೂಪ ಕೊಟ್ಟವರು– **ವರದರಾಜ ಚಂದ್ರಗಿರಿ**.

**1**

**ನಾ**ನು ವ್ಯಾಸರನ್ನು ನೋಡಿದ್ದು ಒಮ್ಮೆ ಮಾತ್ರ. ಅದು ಎಪ್ಪತ್ತರ ದಶಕದಲ್ಲಿ. ಬೆಂಗಳೂರಿನಲ್ಲಿ ಮಿತ್ರರ ಮಧ್ಯೆ ನೋಡಿದ್ದೆ. ಅವರೊಂದಿಗೆ ಯಾವತ್ತೂ ಸಂಪರ್ಕ ಇಟ್ಟುಕೊಂಡಿರಲಿಲ್ಲ. ಅವರು ಬರೆಯುತ್ತಿದ್ದ ಕತೆಗಳನ್ನು ಓದುತ್ತಿದ್ದೆ. 'ಕೃತ' ಸಂಕಲನವು ಹಲವು ವರ್ಷಗಳಿಂದ ನನಗೆ ಪ್ರಿಯವಾದ ಕೃತಿ. ವ್ಯಾಸರ ಕತೆಗಳು ಮೇಲಿಂದ ಮೇಲೆ ಪ್ರಕಟವಾಗುತ್ತಾ ಇದ್ದರೂ ಸಿಕ್ತಾ ಇರಲಿಲ್ಲ. ನಾಡಿನಾದ್ಯಂತ ಅವರ ಕತೆಗಳ ಆಸಕ್ತರು ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಇಂಥ ಲೇಖಕರು ಎಲ್ಲಾ ಕಡೆ ಇರ್ತಾರೆ. ಹೆಚ್ಚು ಸಾರ್ವಜನಿಕವಾಗದೆ ತನ್ನಷ್ಟಕ್ಕೇ ತೊಡಗಿಸಿಕೊಳ್ಳುವುದು ಅವರ ಕ್ರಮ. ತಮ್ಮ ಯೋಚನೆಗಳೇನಿದ್ದರೂ ಅವುಗಳನ್ನು ತಮ್ಮ ಕೃತಿಗಳ ಮೂಲಕವೇ ಪ್ರಕಟಪಡಿಸುವವರು.